**Series : ΩQAΩA** **SET-4**

**Question Paper Code No. 13**

रोल नं.
**Roll No.** | | | | | | | | |

Candidates must write the Code on the title page of the answer-book.

- ಈ ಪ್ರಶ್ನೆ ಪತ್ರಿಕೆಯಲ್ಲಿ **8** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **15** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

- Please check that this question paper contains **8** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **15** questions.
- **Please write down the Serial Number of the question in the answer-book before attempting it.**
- 15 minutes time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

*

# ಕನ್ನಡ
# KANNADA

*ಅನುಮತಿಸಲಾದ ಸಮಯ : **2** ಗಂಟೆ* *ಗರಿಷ್ಠ ಅಂಕಗಳು : **40***

*Time allowed : **2** hours* *Maximum Marks : **40***

**General Instructions :**

Read the following instructions carefully and follow :

1. This question paper contains A, B & C three (3) Sections – Unseen Passage, Grammar, Writing Skill, Essay, Letter / Report / Application Writing and Text Books.
2. Part A (Unseen Passage) contains two (2) questions. Attempt both questions.
3. Part B (Grammar, Writing Skill) consists five (5) questions based on specific instructions given in the question itself.
4. Part C (Text Book based – Prose, Poetry, Non detailed Portion) contains 8 questions based on specific instructions given in the question itself.

*

**ಸೂಚನೆಗಳು :**

**ಕೆಳಗೆ ನೀಡಲಾದ ಸೂಚನೆಗಳನ್ನು ಗಮನವಿಟ್ಟು ಓದಿ :**

1. ಪ್ರಶ್ನೆ ಪತ್ರಿಕೆಯು **A, B** ಮತ್ತು **C** ಎಂಬ **ಮೂರು (3)** ವಿಭಾಗಗಳನ್ನು ಒಳಗೊಂಡಿದೆ – ವಾಚನ ಮತ್ತು ಗ್ರಹಿಕಾ ಕೌಶಲ್ಯ, ಅನ್ವಯಿಕ ವ್ಯಾಕರಣ, ಬರವಣಿಗೆ ಕೌಶಲ ಮತ್ತು ಪಠ್ಯಗಳ ಅಧ್ಯಯನ.
2. **ವಿಭಾಗ A,** ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ **ಎರಡು (2)** ಪ್ರಶ್ನೆಗಳನ್ನು ಕೊಡಲಾಗಿದೆ. **ಎರಡು** ಪ್ರಶ್ನೆಗಳಿಗೂ ಉತ್ತರಿಸಬೇಕು.
3. **ವಿಭಾಗ B,** ಅನ್ವಯಿಕ ವ್ಯಾಕರಣ ಮತ್ತು ಬರವಣಿಗೆ ಕೌಶಲ್ಯ ವಿಭಾಗದಲ್ಲಿರುವ **ಐದು (5)** ಪ್ರಶ್ನೆಗಳಿಗೆ ಆಯ್ಕೆ ನೋಡಿ ಉತ್ತರಿಸಬೇಕು.
4. **ವಿಭಾಗ C,** ಪಠ್ಯಗಳ ಅಧ್ಯಯನ (ಗದ್ಯ, ಪದ್ಯ ಮತ್ತು ಪಠ್ಯಪೂರಕ) ವಿಭಾಗದಲ್ಲಿರುವ **ಎಂಟು (8)** ಪ್ರಶ್ನೆಗಳಿಗೆ ಆಯ್ಕೆ ನೋಡಿ ಉತ್ತರಿಸಬೇಕು.

## ವಿಭಾಗ – A

### ವಾಚನ ಮತ್ತು ಗ್ರಹಿಕಾ ಕೌಶಲ್ಯ : 04 ಅಂಕಗಳು

**I.** ಈ ಕೆಳಗಿನ ಗದ್ಯಾಂಶವನ್ನು ಓದಿ, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಮನೆಯಲ್ಲಿ ಒಲೆ ಉರಿಸಲು ಮಹಿಳೆಯರು ಒಣಗಿಬಿದ್ದ ಕಡ್ಡಿ, ತರಗೆಲೆಗಳ ಪುರಲು ಹೆಕ್ಕಿ ತರುತ್ತಾರೆಯೇ ಹೊರತು ಮರವೊಂದು ಒಣಗಿ ನಿಂತಿದ್ದರೂ ಅದನ್ನ ಉರುಳಿಸಲು ಹೋಗುವುದಿಲ್ಲ. 'ಇಂದಲ್ಲ ನಾಳೆ ಅದು ತಾನಾಗೇ ಬೀಳುತ್ತದೆ. ಅಲ್ಲಿಯವರೆಗೆ ಕಾಯೋಣ' ಎನ್ನುತ್ತಾರೆ. ಆದರೆ ಪುರುಷ ಮನೋಭಾವ ಆ ಮರವನ್ನು ಅಂದೇ ಕಡಿದುರುಳಿಸುವುದಕ್ಕೆ ಹಿಂಜರಿಯುವುದಿಲ್ಲ. ನಾಳೆ ಬೀಳುವ ಮರವನ್ನು ಇಂದೇ ಉರುಳಿಸಿ ಸೌದೆ ಮಾಡೋಣ ಎನ್ನುತ್ತಾರೆ. ಇದು ಇಷ್ಟಕ್ಕೇ ಸೀಮಿತವಾದರೆ ತೊಂದರೆ ಇಲ್ಲ. ಆದರೆ ಇಂದು ಒಣಗಿ ನಿಂತ ಮರಕ್ಕೆ ಕೊಡಲಿ ಹಾಕುವವರು, ನಾಳೆ ಸ್ವಲ್ಪ ಬಾಡಿದ ಮರಕ್ಕೆ ಕೊಡಲಿ ಹಾಕುತ್ತಾರೆ. ಹಸಿಮರವನ್ನು ಕತ್ತರಿಸಿ, ಒಣಗಿಸಿ ಮತ್ತೆ ಸೌದೆ ಮಾಡೋಣ ಎನ್ನುತ್ತಾರೆ. ಇದು ಪರಿಸರಕ್ಕೆ ಅಪಾಯಕಾರಿ. ಇಂದಿನ ಸೌದೆಯ ಅಗತ್ಯ ಪೂರೈಸಿಕೊಳ್ಳುವುದಕ್ಕೆ ನಿಲ್ಲಿಸದೆ ಮುಂದಿನ ದಿನಗಳ ಅಗತ್ಯಗಳಿಗೆ ಕೂಡಿಡಲು ಮುಂದಾದರೆ ಪರಿಸರವೆಂಬ ಅಕ್ಷಯಪಾತ್ರೆಯೂ ಬರಿದಾಗುತ್ತದೆ. ಅಕ್ಷಯಪಾತ್ರೆ ಬರಿದಾಗದಂತೆ ಹೆಕ್ಕುವುದೇ ಪರಿಸರ ಸ್ನೇಹಿ. ಪರಿಸರದೊಂದಿಗಿನ ಮಹಿಳೆಯರ ಇಂತಹ ಸ್ನೇಹ ಸಂಬಂಧ ತುಂಬಾ ಸಹಜವಾದದ್ದು ಹಾಗೂ ಅನಾದಿ ಕಾಲದ್ದು. ಪರಿಸರದೊಂದಿಗಿನ ಒಡನಾಟದಲ್ಲಿ ಅನುಸರಿಸುವ ಈ ಸುಸ್ಥಿರ ವಿಧಾನಗಳೂ ಮಹಿಳೆಯರ ಹೆಗ್ಗುರುತು ಎನ್ನಬಹುದು.

ಆಹಾರಕ್ಕಾಗಿ ಬೇಟೆಯನ್ನು ಆಧರಿಸಿದ್ದ ಮಾನವ ಜನಾಂಗ, ಶಿಶುಪಾಲನೆಗಾಗಿ ಮಹಿಳೆಯನ್ನು ಒಂದೆಡೆ ನೆಲೆ ನಿಲ್ಲಿಸಿ, ಆಹಾರ ಸಂಗ್ರಹಣೆಗೆ ಬೇಟೆಯಾಡಲು ಪುರುಷನನ್ನು ಕಳುಹಿಸಿತು. ಹೀಗೆ ತಾತ್ಕಾಲಿಕವಾಗಿ ಮಹಿಳೆಯರು ಒಂದು ಕಡೆ ನಿಂತಾಗ ಬೀಜದಿಂದ ಸಸಿ ಚಿಗುರುವ ಅದ್ಭುತವನ್ನು ಕಂಡರು. ಇದು ಬೀಜವನ್ನು ಬಿತ್ತಿ ಬೆಳೆ ತೆಗೆಯುವ ಕೃಷಿಗೆ ಕಾರಣವಾಯಿತು. ನಂತರದ ಆಧುನೀಕರಣದಲ್ಲಿ ಭೂಮಿಯ ಒಡೆತನ ಪುರುಷನ ಪಾಲಿಗೆ ದಕ್ಕಿತು. ಈ ಒಡೆತನದ ಪದ್ಧತಿ ಬಂದ ಮೇಲೆ ಪುರುಷ ಮಾಡುವ

ಕೆಲಸಕ್ಕೆ ಆರ್ಥಿಕ ಮೌಲ್ಯದ ಪಟ್ಟ ತಗುಲಿಕೊಂಡಿತು. ಇದೇ ಭೂಮಿಯಲ್ಲಿ ಮಹಿಳೆಯರು ಪುರುಷರಿಗಿಂತಲೂ ಹೆಚ್ಚು ಕೆಲಸ ಮಾಡಿದರೂ ಅವರ ಕಾಳಜಿಗೆ, ಶ್ರಮಕ್ಕೆ ಮೌಲ್ಯ ಕಟ್ಟಲಿಲ್ಲ. ಆದರೂ ಮಹಿಳೆ ಭೂಮಿಯೊಂದಿಗಿನ ತನ್ನ ಭಾವನಾತ್ಮಕ ಒಡನಾಟವನ್ನು ಬಿಡಲಿಲ್ಲ. ಈ ಒಡನಾಟ, ಸಂಬಂಧ, ಸ್ನೇಹಗಳೂ ಕೃಷಿಯಲ್ಲಿ, ಮನೆಯ ತೋಟದಲ್ಲಿ, ಊರ ಪಕ್ಕದ ಗೋಮಾಳದಲ್ಲಿ, ದೇವರ ಕಾಡುಗಳಲ್ಲಿ, ಕಾಡು ಉತ್ಪನ್ನಗಳ ಸಂಗ್ರಹದಲ್ಲಿ ಪರಿಸರ ಚಳುವಳಿಗಳಲ್ಲಿ, ಪರಿಸರ ಸಂರಕ್ಷಣೆಯ ಯೋಜನೆಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ವ್ಯಕ್ತಗೊಳ್ಳುತ್ತಲೇ ಇದೆ.

**ಪ್ರಶ್ನೆಗಳು.**

1. ಉರುವಲಿಗೆ ಸಂಬಂಧಿಸಿದಂತೆ ಮಹಿಳೆ ಮತ್ತು ಪುರುಷರ ವಿಚಾರಗಳು ಹೇಗೆ ಭಿನ್ನವಾಗಿವೆ ? **2**

2. ಭೂಮಿಯೊಂದಿಗಿನ ಮಹಿಳೆಯ ಒಡನಾಟವನ್ನು ಎಲ್ಲೆಲ್ಲಿ ಕಾಣಬಹುದು ? **2**

## ವಿಭಾಗ – B

### ಅನ್ವಯಿಕ ವ್ಯಾಕರಣ : 04 ಅಂಕಗಳು

**II.** ಈ ಕೆಳಗಿನ ಸೂಚನೆಯಂತೆ ಬರೆಯಿರಿ.

**3.** ಗಾದೆಯ ಮಾತನ್ನು ವಿಸ್ತರಿಸಿ ಬರೆಯಿರಿ. **2**

ಕುಂಬಾರನಿಗೆ ವರುಷ ; ದೊಣ್ಣೆಗೆ ನಿಮಿಷ

**ಅಥವಾ**

ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು

4. ಈ ಕೆಳಗಿನ ವಾಕ್ಯದಲ್ಲಿರುವ ಎರಡು ನಿಷೇದಾರ್ಥಕ ಎರಡು ಸಂಭವನಾರ್ಥಕ ಪದಗಳನ್ನು ಗುರುತಿಸಿ ಬರೆಯಿರಿ. **2**

ಅವನೇನೂ ಮಾಡನು, ಹೇಳಿದ ಉಪದೇಶವನ್ನು ಕೇಳನು ಎಂಬುದು ಸರಿಯಲ್ಲ. ಪ್ರೀತಿ ವಿಶ್ವಾಸದಿಂದ ಹೇಳಿದರೆ ಕೇಳಿಯಾನು ಎಂಬ ಭರವಸೆಯಿದೆ. ಅವನಿಂದ ಸಹ ಉತ್ತಮ ಕಾರ್ಯ ನಡೆದೀತು.

**III.** **ಬರವಣಿಗೆ ಕೌಶಲ್ಯ : 12 ಅಂಕಗಳು**

5. ಈ ಕೆಳಗಿನ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಪ್ರಬಂಧ ಬರೆಯಿರಿ. **4**

   (i) ಒಲಿಂಪಿಕ್ಸ್ ಕ್ರೀಡೆಗಳು

   (ii) ರಕ್ತದಾನ ಮತ್ತು ನೇತ್ರದಾನದ ಮಹತ್ವ

   (iii) ಭಾರತದ ಬಾಹ್ಯಾಕಾಶ ಕ್ಷೇತ್ರದ ಸಾಧನೆ

6. ನಿಮ್ಮ ಕಾಗದಗಳು ಸರಿಯಾಗಿ ಬಟವಾಡೆ ಆಗುತ್ತಿಲ್ಲವೆಂಬುದನ್ನು ತಿಳಿಸುತ್ತಾ ಅಂಚೆ ವಿಭಾಗದ ಅಧಿಕಾರಿಗಳಿಗೆ ಪತ್ರ ಬರೆಯಿರಿ. **4**

**ಅಥವಾ**

ದಿನಾಂಕ 25-02-2022 ರ ವಿಶ್ವವಾಣಿ ದಿನಪತ್ರಿಕೆಯ ಜಾಹೀರಾತಿನ ಮೇರೆಗೆ ಆಡಳಿತ ಮಂಡಳಿ, ವಿವೇಕಾನಂದ ವಿದ್ಯಾ ಮಂದಿರ, ತುಮಕೂರು – ಇಲ್ಲಿಗೆ ಗ್ರಂಥಪಾಲಕರ ಹುದ್ದೆಗೆ ಅರ್ಜಿಯನ್ನು ಬರೆಯಿರಿ.

7. ವರಕವಿ ದ.ರಾ. ಬೇಂದ್ರೆಯವರ ಪ್ರತಿಮೆಯ ಅನಾವರಣ ಸಮಾರಂಭದ ವರದಿಯನ್ನು ತಯಾರಿಸಿ. **4**

## ವಿಭಾಗ – C

### ಪದ್ಯಗಳ ಅಧ್ಯಯನ : 20 ಅಂಕಗಳು

**IV.** ಈ ಕೆಳಗಿನ ಪ್ರಶ್ನೆಗಳಿಗೆ **ಎರಡು/ಮೂರು** ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2 × 3 = 6**

8. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?

9. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?

10. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು ?

**V.** ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ. **3 × 2 = 6**

11. ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು

**ಅಥವಾ**

ಹುಸಿಯದ ಬೇಹಾರಿಯೇ ಇಲ್ಲ

12. ಬೇರೆ ಬಣ್ಣವನೆ ಕಾಣೆ

**ಅಥವಾ**

ಅರಸುಗಳ ವಾಜಿಯಂ ಬಿಡು

**VI.** ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ. **2 × 2 = 4**

13. ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು ?

14. ಬಡತನ, ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ ?

**VII.** ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು **ಹತ್ತು** ವಾಕ್ಯಗಳಲ್ಲಿ ಉತ್ತರಿಸಿ. **4 × 1 = 4**

15. ಪ್ರಕೃತಿಯ 'ಹಸುರು' ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

**ಅಥವಾ**

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

---

*